ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಾಗಮಂಗಲ

ಸಿಂಸಿ ನಂಃ890/2021

| | | | | | |
|---|---|---|---|---|---|
| **ಸಾಕ್ಷಿಯ ಹೆಸರು** | ಃ | ಸುನೀಲ್ ಕುಮಾರ್ ಎಂ ಕೆ | **ದಿನಾಂಕ** | ಃ | 05-12-2023 |
| ಗಂಡ/ತಂದೆ **ಹೆಸರು** | ಃ | ಕರೀಗೌಡ | **ಸಿ ಡಬ್ಲ್ಯೂ** | ಃ | 04 |
| **ವಯಸ್ಸು** | ಃ | 33 ವರ್ಷ | **ಪಿ ಡಬ್ಲ್ಯೂ** | ಃ | 03 |
| **ಉದ್ಯೋಗ** | ಃ | ಹಾಸ್ಟೇಲ್ ವಾರ್ಡನ್ | | | |
| **ವಿಳಾಸ** | ಃ | ಕೊಳ್ಳೇಗಾಲ. | | | |

**ಪ್ರಮಾಣ ವಚನ ಬೋಧಿಸಲಾಯಿತುಂ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ನಾನು **2019** ರಿಂದ **2022** ವರೆಗೆ ನಾಗಮಂಗಲ ಅಬಕಾರಿ ನೀರಿಕ್ಷಕರ ಕಛೇರಿಯಲ್ಲಿ ಅಬಕಾರಿ ರಕ್ಷಕನಾಗಿ ಸೇವೆ ಸಲ್ಲಿಸಿದ್ದೇನೆ. ದಿನಾಂಕಃ **12-12-2020** ರಂದು ಸಂಜೆ **4ಃ00** ಗಂಟೆ ಸಮಯದಲ್ಲಿ ನಾನು ಮತ್ತು ನಮ್ಮ ಸಿಬ್ಬಂದಿಗಳಾದ ಚಾ.ಸಾ.**1, 5** ಮತ್ತು **6** ಬಿಂಡಿಗನವಿಲೆ-ನಾಗಮಂಗಲ ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದೇವು. ಮಾಯಿಗೋನಹಳ್ಳಿ ಗೇಟ್ ಹತ್ತಿರ ಇರುವಾಗ ಚಾ.ಸಾ.**1** ರವರಿಗೆ ಮಾಹಿತಿ ಬಂದಿದ್ದು, ಟಿ ವಿ ಎಸ್ ಎಕ್ಸ ಎಲ್ ವಾಹನ ನಂಬರ್ ಕೆಎ-**54**-ಇ-**4580** ಮೇಲೆ ಗುರುದೇವ್ ಬಿನ್ ತಿಮ್ಮೇಗೌಡ, ಪಿ ನೆರಳೆಕೆರೆ ಗ್ರಾಮದವರು, ಅದ್ದಿಹಳ್ಳಿ ಹ್ಯಾಂಡ್ ಪೋಸ್ಟ ಕಡೆಯಿಂದ ಸದರಿ ವಾಹನದ ಮೇಲೆ ಮದ್ಯವನ್ನು ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ಆಗ ನಾವು ಅಲ್ಲೇ ಇದ್ದ ಚಾ.ಸಾ-**2** ಮತ್ತು **3** ರವರಿಗೆ ಸದರಿ ವಿಚಾರ ತಿಳಿಸಿ ದಾಳಿಗೆ ಪಂಚರಾಗಿ ಸಹಕರಿಸಲು ಕೋರಿದ ಮೇರೆಗೆ ಅವರು ಒಪ್ಪಿರುತ್ತಾರೆ. ನಂತರ ನಮ್ಮ ಇಲಾಖಾ ವಾಹನದಲ್ಲಿ ಪಂಚರನ್ನು ಕರೆದುಕೊಂಡು ದೊಡ್ಡಬಾಲ ಗ್ರಾಮದ ಹಾಲಿನ ಡೈರಿ ಹತ್ತಿರ ಹೋಗಿ ವಾಹನ ನಿಲ್ಲಿಸಿ ನಾವು ಮರೆಯಲ್ಲಿ ನಿಂತು ಕಾಯುತ್ತಿದ್ದೇವು. ಸ್ವಲ್ಪ ಸಮಯದಲ್ಲಿ ಮಾಹಿತಿ ಬಂದ ವ್ಯಕ್ತಿ ಟಿ ವಿ ಎಸ್ ವಾಹನದ ಮೇಲೆ ಒಂದು ಬಿಳಿ ಚೀಲ ಇಟ್ಟುಕೊಂಡು ಬರುತ್ತಿದ್ದ. ನಾವು ಸದರಿ ವ್ಯಕ್ತಿಗೆ ವಾಹನ ನಿಲ್ಲಿಸಲು ಸೂಚಿಸಿದಾಗ ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ನೋಡಿ ಭಯಭಿತನಾಗಿ ಡೈರಿ ಪಕ್ಕದಲ್ಲಿ ಇರುವ ಒಂದು ಗಲ್ಲಿಯಲ್ಲಿ ವಾಹನ ಮತ್ತು ಮೂಟೆಯನ್ನು ಕೆಡವಿ ಅಲ್ಲಿಂದ ಓಡಿ ಹೋದರು. ನಾವು ಹಿಡಿಯಲು ಪ್ರಯತ್ನಿಸಿದರು ಸಿಗಲಿಲ್ಲ, ತಲೆಮರಿಸಿಕೊಂಡ. ವಾಪಸ್ಸು ಬಂದು ಸರ್ಚ ವಾರಂಟ್ ತಯಾರಿಸಿ ಪಂಚರ ಸಮಕ್ಷ ವಾಹನ ತಪಾಸಣೆ ಮಾಡಲು ಸಿದ್ದರಾದೇವು. ಸದರಿ ವಾಹನ ಪರೀಸಿಲಿಸಿದಾಗ ಅದು ಹಸಿರು ಬಣ್ಣದ ಟಿ ವಿ ಎಸ್ ಎಕ್ಸ ಎಲ್ ಹೆವ್ವಿ ಡ್ಯೂಟಿ ವಾಹನವಾಗಿದ್ದು ಅದರ ನಂಬರ್ ಕೆಎ-**54**-ಪಿ-**4580** ಇರುತ್ತದೆ. ಬಳಿ ಬಣ್ಣದ ಚೀಲ ಪರೀಶೀಲಿಸಲು ಅದರಲ್ಲಿ ಇರುವ ವಸ್ತುಗಳನ್ನು ಕೆಳಗೆ ಚೆಲ್ಲಿದಾಗ ಅದರಲ್ಲಿ **90** ಮೀಲಿಯ **42** ರಾಜಾ ವಿಸ್ಕಿ ಟೆಟ್ರಾ ಪ್ಯಾಕೇಟ್ ಇದ್ದವು. ಸರ್ಕಾರಿ ಪರವಾನಗೆ ಪರೀಶಿಲಿಸಿದಾಗ ಕಂಡು ಬಂದಿರುವುದಿಲ್ಲ.

ಪಂಚರ ಸಮಕ್ಷ ಜಪ್ತು ಪತ್ರ ತಯಾರಿಸಿ ಸದರಿ ಮದ್ಯದ ಪ್ಯಾಕೇಟ್ ಗಳನ್ನು ವಶಕ್ಕೆ ಪಡೆದು ರಾಸಾಯನಿಕ ಪರೀಕ್ಷೆಗಾಗಿ ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಅರಗಿನಿಂದ-310 ಇಲಾಖಾ ಸೀಲ್ ಮಾಡಿ ವಾಹನ, ಬಿಳಿ ಚೀಲ ಮತ್ತು ಬಟ್ಟೆಯ ಚೀಲಕ್ಕೆ ಪಂಚರ ಸಹಿ ಇರುವ ಚೀಟಿಗಳನ್ನು ಅಂಟಿಸಿದೇವು. ಮಾದರಿ ಸೀಲಿನ ನಕಲನ್ನು ತಯಾರಿಸಿದೇವು. ಸಂಜೆ 4:00 ರಿಂದ 5:00 ಗಂಟೆ ವರೆಗೆ ಮಹಜರ್ ಕ್ರಮ ಜರುಗಿಸಿದೇವು. ಮಹಜರ್ ನಾನೇ ಬರವಣಿಗೆ ಮಾಡಿ ಸಹಿ ಮಾಡಿದ್ದೇನೆ. ನಂತರ ಜಪ್ತು ಪಡಿಸಿದ ಮಾಲಿನೊಂದಿಗೆ ಅಬಕಾರಿ ಕಛೇರಿಗೆ ವಾಪಸ್ಸಾಗಿ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿದ್ದೇವೆ. ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿ ನಿಪಿ.2(ಸಿ) ಎಂದು ಗುರುತಿಸಲಾಯಿತು. ಸದರಿ ದಿನ ನಾವು ದಾಳಿ ಮಾಡಿದಾಗ ವಾಹನ ಮತ್ತು ಮದ್ಯದ ಪ್ಯಾಕೇಟ್ ಇರುವ ಚೀಲ ಬಿಟ್ಟು ಓಡಿ ಹೋದ ವ್ಯಕ್ತಿ ನ್ಯಾಯಾಲಯದ ಮುಂದೆ ಆರೋಪಿಯಾಗಿ ಹಾಜರಿದ್ದಾರೆ. ಸದರಿ ದಿನ ನಾವು ವಶಕ್ಕೆ ಪಡೆದ ಮದ್ಯದ ಪ್ಯಾಕೇಟ್ ಗಳು, ಒಂದು ಬಿಳಿ ಚೀಲ ಹಾಗೂ ರಾಸಾಯನಿಕ ಪರೀಕ್ಷೆಗಾಗಿ ಮದ್ಯದ ಪ್ಯಾಕೇಟ್ ಗಳನ್ನು ಹಾಕಿದ ಬಿಳಿ ಬಟ್ಟೆಯ ಚೀಲ ನ್ಯಾಯಾಲಯದ ಮುಂದೆ ಇರುತ್ತವೆ. ( ಅವುಗಳನ್ನು ಈಗಾಗಲೇ ಮು.ಮಾ-1 ರಿಂದ 44 ಎಂದು ಗುರುತಿಸಲಾಗಿದೆ). ನಿಪಿ.9 ರಿಂದ 12 ಪೋಟೋ ನೋಡುತ್ತಿದ್ದು, ಅದರಲ್ಲಿ ಸದರಿ ದಿನ ಆರೋಪಿ ಚಾಲನೆ ಮಾಡಿಕೊಂಡು ಬರುತ್ತಿದ್ದ ಹಾಗೂ ನಾವು ವಶಕ್ಕೆ ಪಡೆದ ವಾಹನ ಇರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. ನಾನು ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟಿಲ್ಲ. ಮಾಹಿತಿ ಬಂದಾಗ ನಾವು ಮಾಯಿಗೋನಹಳ್ಳಿ ಗೇಟ್ ನಿಂದ ಕಾಲು ಕಿ.ಮೀ ದೂರ ಬಿಂಡಿಗನವಿಲೆ ಕಡೆಗೆ ಇದ್ದೇವು. ಸಾಯಂಕಾಲ 3:50 ಗಂಟೆ ಸುಮಾರಿಗೆ ಮಾಹಿತಿ ಬಂದಿರುತ್ತದೆ. ಪಂಚರ ಹೆಸರು ಕುಮಾರ್ ಮತ್ತು ಸುರೇಶ್ ಇದ್ದು, ಇಬ್ಬರು ಪಿ.ನೆರಳೆಕೆರೆ ಗ್ರಾಮದವರು. ಪಂಚರಿಗೆ ಚಾ.ಸಾ - 1 ರವರು ಮೌಖಿಕವಾಗಿ ಕರೆದಿದ್ದಾರೆ. ಚಾ.ಸಾ.2 ಮತ್ತು 3 ರವರನ್ನು ಪಂಚರಾಗಿ ಕರೆದುಕೊಂಡು ಹೋಗಿದ್ದೇವೆ ಎಂದು ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟಿಲ್ಲ. ಮಾಹಿತಿ ಬಂದ 10 ನಿ.ದಲ್ಲಿ ದೊಡ್ಡಬಾಲ ಗ್ರಾಮಕ್ಕೆ ಹೋಗಿದ್ದೇವೆ. ಸದರಿ ಗ್ರಾಮದ ಮುಖ್ಯ ರಸ್ತೆಯ ಎರಡು ಬದಿಗೆ ಮನೆಗಳು ಇರುತ್ತವೆ ಎಂದರೆ ಸರಿ. ನಾವು ಅಲ್ಲಿಯ ಹಾಲಿನ ಡೈರಿಯ ಮರೆಯಲ್ಲಿ ನಿಂತು ಕಾಯುತ್ತಿದ್ದೇವು. ಆರೋಪಿಗೆ ಸುಮಾರು 50-100 ಮೀ. ದೂರದಿಂದ ನೋಡಿದ್ದೇವೆ. ಆರೋಪಿ ಅದ್ದಿಹಳ್ಳಿ ಕಡೆಯಿಂದ ನಾವು ನಿಂತ ಸ್ಥಳದ ಕಡೆಗೆ ಬರುತ್ತಿದ್ದರು. ಆರೋಪಿ ಸುಮಾರು 50 ಮೀ. ದೂರವಿದ್ದಾಗ ನಿಲ್ಲಿಸಲು ಸೂಚನೆ ಕೊಟ್ಟಿದ್ದೇವೆ.

ನಾನು ಇದೇ ಮೊದಲನೆ ಬಾರಿಗೆ ಆರೋಪಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ, ಸದರಿ ದಿನ ವಾಹನದ ಮೇಲೆ ಬರುತ್ತಿದ್ದಾಗ ನೋಡಿದ್ದೇನೆ. ಮದ್ಯದ ಪ್ಯಾಕೇಟ್ ಯಾವ ಕಂಪನಿಯಿಂದ ತಯಾರಿಸಲಾಗಿದೆ ಗೊತ್ತಿಲ್ಲ. ನಾನು ಮೂರು ವರ್ಷ ಅಬಕಾರಿ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಮದ್ಯದ ಪ್ಯಾಕೇಟ್ ಗಳನ್ನು 90 ಎಂ.ಎಲ್ ಟೇಟ್ರಾ ಪ್ಯಾಕೇಟ್ ಎಂದು ಕರೆಯುತ್ತಾರೆ. ನಾವು ಅಮಾನತು ಪಡಿಸಿಕೊಂಡ ಮದ್ಯದ ಪ್ಯಾಕೇಟ್ ಗಳ ಬಾಚ್ ನಂಬರ್ ನೋಡಿಲ್ಲ. ಸದರಿ ಪ್ಯಾಕೇಟ್ ಗಳು ಯಾವ ತಯಾರಿಕಾ ಘಟಕದಿಂದ ಯಾವ ಮದ್ಯದ ಅಂಗಡಿಗೆ ಸರಬರಾಜು ಆಗಿತ್ತು ತಿಳಿದುಕೊಂಡಿಲ್ಲ. ಮದ್ಯದ ಪ್ಯಾಕೇಟ್ ಸೀಲ್ ಮಾಡಲು ಬಳಸಿದ ಬಿಳಿ ಬಟ್ಟೆಯ ಚೀಲ ಮತ್ತು ಅರಗು ಮುಂತಾದ ವಸ್ತುಗಳನ್ನು ನಾವು ಯಾವಾಗಲೂ ಇಲಾಖಾ ವಾಹನದಲ್ಲಿ ಇಟ್ಟಿರುತ್ತೇವೆ. ಸದರಿ ಸಮಯದಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ಇದ್ದ ಕಾರಣ ಇಲಾಖಾ ಅಂಕಿ ಅಂಶಕ್ಕೋಸ್ಕರ ಆರೋಪಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ದಿನ ಆರೋಪಿ ಯಾವುದೇ ಮದ್ಯ ತೆಗೆದುಕೊಂಡು ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾವು ಸ್ಥಳದಲ್ಲಿ ಚಾ.ಸಾ.2 ಮತ್ತು 3 ರವರ ಸಮಕ್ಷ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಪೂರಕವಾಗುವಂತೆ ಪಂಚನಾಮೆ ನಮ್ಮ ಕಛೇರಿಯಲ್ಲಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಖಾಲಿ ಕಾಗಗದ ಮೇಲೆ ಪಂಚರ ಸಹಿ ಪಡೆದು ಕಛೇರಿಯಲ್ಲಿ ಪಂಚನಾಮೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಖಾಲಿ ಕಾಗದದ ಮೇಲೆ ಪಂಚರ ಸಹಿ ಪಡೆದಿದ್ದರಿಂದ ಪಂಚನಾಮೆಯ ಎರಡನೆ ಪುಟದ ಕೊನೆಯಲ್ಲಿ ಹೆಚ್ಚಿನ ಸ್ಥಳಾವಕಾಶ ಬಿಟ್ಟಿರುತ್ತೇವೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮದ್ಯದ ಪ್ಯಾಕೇಟ್ ಗಳು ಪೌಚ್ ಗಳಾಗಿದ್ದು, ಟೆಟ್ರಾ ಪ್ಯಾಕ್ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಚಾ.ಸಾ.1 ರವರು ಸಲ್ಲಿಸಿದ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>** ಃ ಇಲ್ಲ

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು

ನಾಗಮಂಗಲ.